ಸಂದರ್ಶನ: ನರೇಂದ್ರ ಪೈ

## ಮಾತುಕತೆ ಕೆ.ಟಿ. ಗಟ್ಟಿ ಜತೆ

# “ವೈಚಾರಿಕತೆ ಇಲ್ಲದ ಸೃಜನಶೀಲತೆ ಅಸಾಧ್ಯ

ಶ್ರೀಕೃಷ್ಣ ಟ್ರೇಡರ್ಸ್‌ನ ಮಂಜುನಾಥ ಬಾಯ್ರಿಯವರು ಚಪ್ಪಲಿಯನ್ನೂ ಮೆಟ್ಟಿಕೊಳ್ಳದೆ ಬನ್ನಿ ಬನ್ನಿ ಎನ್ನುತ್ತ ಅಂಗಡಿ ಬಿಟ್ಟು ಹೊರಬಂದವರೇ ಪಿರಿಪಿರಿ ಮಳೆಯಲ್ಲೇ ಎದುರಿನ ರಿಕ್ಷಾ ಸ್ಟ್ಯಾಂಡಿನತ್ತ ನಡೆದು ಅತ್ತಿತ್ತ ಹುಡುಕಾಡಿದಂತೆ ಮಾಡಿ, ಒಂದು ಆಟೊ ಹಿಡಿದು ಅದರ ಡ್ರೈವರ್ ಬಳಿ ಏನೋ ಒಂದಿಷ್ಟು ಹೇಳಿ ಮತ್ತೆ ನನ್ನತ್ತ ತಿರುಗಿ ‘ನೀವು ಕುಳಿತುಕೊಳ್ಳಿ, ಇವರು ನಿಮ್ಮನ್ನು ಅಲ್ಲಿಗೆ ಮುಟ್ಟಿಸ್ತಾರೆ’ ಎಂದರು.

ತುಂಬ ಉಪಕಾರವಾಯಿತು ಎನ್ನುತ್ತಲೇ ನಾನು ರಿಕ್ಷಾದ ಒಳಗೆ ತೂರಿಕೊಂಡೆ. ಗುರುವಾಯನಕೆರೆ ಹತ್ತಿರ ಬರುವಾಗಲೇ ಧೋ ಎಂದು ಮಳೆ ಸುರುವಾಗಿತ್ತು. ಸದ್ಯ ಉಜಿರೆಯಲ್ಲಿ ಇಳಿಯುವಾಗ ಸ್ವಲ್ಪ ಕಡಿಮೆಯಾಗಿ ನಿಂತಂತೆಯೇ ಆಗಿತ್ತು. ರಿಕ್ಷಾ ಸಾಕಷ್ಟು ದೂರ ರಸ್ತೆಯಲ್ಲೇ ಸಾಗಿ ನಂತರ ಎಡಕ್ಕೆ ಹೊರಳಿ ಕಲ್ಲು, ಜಲ್ಲಿಯ ಕೆಮ್ಮಣ್ಣಿನ ರಸ್ತೆಯಲ್ಲಿ ಸಾಗತೊಡಗಿತು. ಕೊನೆಗೊಮ್ಮೆ ರಿಕ್ಷಾ ನಿಲ್ಲಿಸಿ ಇದೇ ಮನೆ ಎಂದನಾತ. ಗೇಟಿನ ಮೇಲೆ ‘ವನಶ್ರೀ’.

ಯಶೋದಮ್ಮನವರು ಬಾಗಿಲಿಗೆ ಬಂದು ಬನ್ನಿಬನ್ನಿ ಎನ್ನುತ್ತ ಕರೆದರು. ಸ್ವಲ್ಪ ಹೊತ್ತಿನಲ್ಲೇ